ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ,ಅರಸೀಕೆರೆ.

ಸಿ.ಸಿ. **555/2022**

ಫಿರ್ಯಾದುದಾರರು ::    ರೇಖಾ ಎ.ವೈ,

:: ವಿರುದ್ಧ::

ಆರೋಪಿ ::    ಆರ್.ಕೆ.ಮಂಜು

**:: ಆಪಾಧನೆ ::**

ಶ್ರೀಮತಿ. ಅನಿತ ಜಿ. ಬಿ.ಕಾಂ., ಎಲ್.ಎಲ್.ಬಿ. ಡಿ.ಸಿ.ಎಸ್., ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಅರಸೀಕೆರೆ ಆದ ನಾನು, ಆರೋಪಿಯಾದಃ-

ಆರ್.ಕೆ.ಮಂಜು ಬಿನ್ ಕಣ್ಣನ್ ಆರ್.
ಸುಮಾರು 35 ವರ್ಷ,
ರೈಲ್ವೇ ಕ್ಯಾಂಟೀನ್ (ಇಡ್ಲಿ ಮಂಜ)
ಅರಸೀಕೆರೆ ರೈಲ್ವೇ ಸ್ಟೇಷನ್,

ಮನೆ ವಿಳಾಸಃ-
ಆರ್.ಕೆ. ಮಂಜು ಬಿನ್ ಕಣ್ಣನ್ ಆರ್.
ಸುಮಾರು 35 ವರ್ಷ,
ಮೊದಲಿಯಾರ್ ಬೀದಿ,
ಅರಸೀಕೆರೆ ಟೌನ್. ಕಸಬಾ ಹೋಬಳಿ,
ಅರಸೀಕೆರೆ ತಾಲ್ಲೂಕು.

ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ-

ಫಿರ್ಯಾದುದಾರರು ಮತ್ತು ಆರೋಪಿಯಾದ ನೀವು ಸ್ನೇಹಿತರಾಗಿದ್ದು ಪರಸ್ಪರ ಪರಿಚಯಸ್ಥರಾಗಿದ್ದು ನಿಮ್ಮ ಗೃಹಕೃತ್ಯದ ಖರ್ಚಿಗಾಗಿ, ವೈಯಕ್ತಿಕ ಸಾಲ ತಿರುವಳಿ ಹಾಗೂ ದರ್ದು ನಿಮಿತ್ತ ಫಿರ್ಯಾದುದಾರರಿಂದ ದಿನಾಂಕ 21-04-2022 ರಂದು ರೂ.1,00,000/- ಗಳನ್ನು ಕೈಗಡ ಸಾಲವಾಗಿ ನಗದು ರೂಪದಲ್ಲಿ ಪಡೆದುಕೊಂಡಿರುತ್ತೀರಿ. ಸದರಿ ಸಾಲದ ಹಣವನ್ನು 1 ತಿಂಗಳೊಳಗಾಗಿ ಮರು ಪಾವತಿ ಮಾಡುವುದಾಗಿ ಹೇಳಿರುತ್ತೀರಿ. ಸದರಿ ಅವಧಿ ಮುಗಿದ ನಂತರ ಫಿರ್ಯಾದುದಾರರು ನಿಮ್ಮನ್ನು ಸಾಲದ ಹಣ ಮರುಪಾವತಿಸುವಂತೆ ಕೇಳಿದಾಗ ರೂ.1,00,000ರೂ.ಗಳಿಗೆ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಬಿ.ಹೆಚ್. ರಸ್ತೆ, ಅರಸೀಕೆರೆ ಶಾಖೆಯ ಚೆಕ್ ನಂ: 000019 ನ್ನು ದಿ:25-05-2022 ರ ದಿನಾಂಕ ನಮೂದಿಸಿ ಫಿರ್ಯಾದುದಾರರ ಹೆಸರಿಗೆ ಬರೆದುಕೊಟ್ಟಿರುತ್ತೀರಿ. ಸದರಿ ಹಣವನ್ನು ನಗದೀಕರಿಸಲು ಫಿರ್ಯಾದುದಾರರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಅರಸೀಕೆರೆ ಶಾಖೆಯ ಮುಖಾಂತರ

ನಗದೀಕರಣಕ್ಕಾಗಿ ಹಾಜರುಪಡಿಸಿದಾಗ ನಿಮ್ಮ ಖಾತೆಯಲ್ಲಿ ಚೆಕ್ ನಗದಾಗುವಷ್ಟು ಹಣ ಇಲ್ಲ ಎಂದು " ಫಂಡ್ಸ್ ಇನ್‌ಸಫೀಶಿಯಂಟ್ಸ್ '' ಎಂಬ ಷರಾದೊಂದಿಗೆ ಸದರಿ ಚೆಕ್ಕನ್ನು ಅಮಾನ್ಯಗೊಳಿಸಿ ದಿಃ 22-07-2022 ರಂದು ವಾಪಸ್ಸು ಮಾಡಿರುತ್ತಾರೆ. ಈ ಬಗ್ಗೆ ನಿಮಗೆ ಫಿರ್ಯಾದುದಾರರಿಂದ ದಿಃ02-08-2022 ರಂದು ನೋಟೀಸ್ ಗಳನ್ನು ನೀಡಿದ್ದು ಸದರಿ ನೋಟೀಸ್‌ಗಳು ದಿಃ 11-08-2022 ರಂದು ಜಾರಿಯಾಗಿದ್ದರೂ ಸಹ ಸದರಿ ಚೆಕ್ ನ ಹಣವನ್ನು ಪಾವತಿಸದೇ ಹಾಗೂ ಸದರಿ ನಿಮ್ಮ ಖಾತೆಯಲ್ಲಿ ಚೆಕ್ ನಗದಾಗುವಷ್ಟು ಹಣ ಇಲ್ಲದೇ ಇರುವ ವಿಚಾರ ಚೆನ್ನಾಗಿ ತಿಳಿದಿದ್ದರೂ ಸಹ ಸದರಿ ವಿಚಾರವನ್ನು ಫಿರ್ಯಾದುದಾರರಿಂದ ಮುಚ್ಚಿಟ್ಟು ಮೋಸ ಮಾಡುವ ಉದ್ದೇಶದಿಂದ ಚೆಕ್ ನೀಡಿರುತ್ತೀರಿ. ಈ ಮೂಲಕ "ನೆಗೋಷಿಯಬಲ್ ಇನ್ಸ್ಟ್ರುಮೆಂಟ್ಸ್ " ಕಲಂ 138ಎನ್.ಐ ಆಕ್ಟ್ ರಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾತಿಯಲ್ಲಿ ಮಾಡಿರುತ್ತೀರಿ.

ಪ್ರಶ್ನೆಃ- ಮೇಲೆ ಓದಿ ಹೇಳಿದ ಆಪಾದನೆಯು ಅರ್ಥವಾಯಿತೇ?

ಉತ್ತರಃ ಹೌದು

ಪ್ರಶ್ನೆಃ- ಮೇಲಿನ ಆಪಾದನೆಯನ್ನು ಒಪ್ಪಿಕೊಳ್ಳುವಿರೇ?ಅಥವಾ ವಿಚಾರಣೆಯಾಗಬೇಕೆ?

ಉತ್ತರಃ ಇಲ್ಲಾ, ವಿಚಾರಣೆಯಾಗಬೇಕು

(ಮೇಲಿನ ಆಪಾದನೆಯನ್ನು ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ಅವರು ಅರ್ಥೈಸಿಕೊಂಡು ನೀಡಿದ ಉತ್ತರವನ್ನು ಸರಿಯಾಗಿ ನನ್ನ ಸ್ವ ಹಸ್ತದಿಂದ ಬರೆದುಕೊಂಡಿರುತ್ತೇನೆಂದು ದೃಢೀಕರಿಸುತ್ತೇನೆ.)

( ಅನಿತ ಜಿ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಅರಸೀಕೆರೆ.